ಶ್ರೀ ಎಚ್. ಎಸ್. ಸಿದ್ದಪ್ಪ.—ಎರಡು ಕಡೆಯ ಸಭಾನಾಯಕರೂ ಸೇರಿ ಒಂದು ತೀರ್ಮಾನ ಮಾಡಿ ಪ್ರಶ್ನೆಕಳಿಸಿದವರು ಅದು ಸಭೆಯ ಮುಂದೆ ಬಂದ ದಿನ ಹಾಜರಿಲ್ಲದಿದ್ದರೆ ಉತ್ತರ ಒದಗಿಸಲು ಆಗುವ ಅರ್ಥ ಧಾರ್ಜನ್ನು ಸಂಬಂಧಪಟ್ಟ ಸದಸ್ಯರಿಂದ ವಸೂಲು ಮಾಡಿದರೆ ಅನುಕೂಲ.

ಅಧ್ಯಕ್ಷರು.—ಸದಸ್ಯರು ತಮ್ಮ ಜವಾಬ್ದಾರಿ ಎಷ್ಟಿರುತ್ತವೆಂಬುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ ಆಗುತ್ತದೆ ?

ಶ್ರೀ ಜಿ. ಎಲ್. ಕಛಾಡಿ.—ಯಾವತ್ತಿನ ದಿವಸ ಯಾವ ಪ್ರಶ್ನೆ ತೆಗೆದುಕೊಳ್ಳುತ್ತೇವೆಂದು ನೋಟೀಸ್ ಸದಸ್ಯರಿಗೆ ಕೊಟ್ಟರೆ ಆವತ್ತಿನ ದಿವಸ ಸದಸ್ಯರು ಹಾಜರು ಆಗಿರುವುದಕ್ಕೆ ಶಕ್ಯವಾಗುತ್ತದೆ. ಯಾವ ಪ್ರಶ್ನೆ ಬರುತ್ತದೆಂದು ಗೊತ್ತಾಗದಿರುವುದರಿಂದ ಕೆಲವು ಸಮಯ ಸದಸ್ಯರು ಗೈರು ಹಾಜರಿರುತ್ತಾರೆ. ಆದ್ದರಿಂದ ಈ ಪದ್ಧತಿಯನ್ನು ಅನುಸರಿಸಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಪಾರ್ಲಿಮೆಂಟಿನಲ್ಲಿ ಹೇಗಿದೆ ಎಂಬುದನ್ನು ನೋಡಿಕೊಂಡು ಬನ್ನಿ. ಅಲ್ಲಿ ಪ್ರಶ್ನೆ ಕೇಳಿ ಉತ್ತರ ಪಡೆಯಬೇಕು. All the members are expected to be present here and be alert.

SHORT NOTICE QUESTION AND ANSWER

Allotment of House in Vasanthanagar

24. **Sri B. G. BANAKAR** (Hirekerur).—

Will the Minister for Public Works and Electricity be pleased to state :—

(*a*) whether it is a fact that House No. 88 in Vasanthanagar was allotted to the Government servant, Sri B. Hanumanthe Gowda, who died on 18-5-1972 ;

(*b*) whether the Government is aware of the fact that a large number of Government servants are not alloted Government houses and as such they are put to inconvenience ;

(*c*) the reasons for not taking possession of House No. 88 and allotting the same to other Government Servants ;

(*d*) whether the Government is aware of the fact that the allotment of House No 88 to the diseased Government servant Sri B. Hanumanthe Gowda was illegal since he had his own house in Basavangudi, Bangalore ;

(*e*) the person responsible for the allotment and the nature of action taken or proposed to be taken against such officer ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Yes.

(*c*) After the demise of Sri Hanumanthe Gowda, his wife Smt. Gangamma was permitted to continue in the house till the end of April 1973 and she is in occupation of the house.

(SRI H. M. CHANNABASAPPA)

(*d*) No. That the late officer had a house in Bangalore, was known only when his wife mentioned it in her representation.

(*e*) Does not arise.

ಶ್ರೀ ಬಿ. ಜಿ. ಬಣಕಾರ್.— ಇನ್ನು ಮುಂದೆ ಸರ್ಕಾರೀ ನೌಕರರವಾರಿಗೆ ವಸಂತನಗರದಲ್ಲಿ ಯಾರಿಲ್ಲೀ ಬೇರೆ ಕಡೆ ಸರ್ಕಾರ ನಿವೇಶನ ಕೊಡುವಾಗ ಅವರಿಗೆ ಸ್ವಂತ ಮನೆ ಇವೆಯೋ ಇಲ್ಲವೋ ಎಂಬುದನ್ನು ಖಾತರಿ ಮಾಡಿಕೊಂಡು ಮನೆ ಇಲ್ಲದವರಿಗೆ ನಿವೇಶನ ಕೊಡುವ ಪದ್ಧತಿಯನ್ನು ಜಾರಿಗೆ ತರುತ್ತಾರೋ ?

†ಶ್ರೀ ಎಚ್. ಎಂ. ಚನ್ನಬಸಪ್ಪ.— ಈಗಿರತಕ್ಕ ಪದ್ಧತಿಯಲ್ಲಿ ಅದು ಇದೆ.

ಶ್ರೀ ಬಿ. ಜಿ. ಬಣಕಾರ್.—ಈಗ ಇರುವ ನಿವಲತ್ತನ್ನು ಕೊಟ್ಟಿದ್ದೀರಿ, ಅಧಿಕಾರಿ ತೀರಿ ಕೊಂಡರೆ ಮನೆಯಲ್ಲಿ ಒಂದು ವರ್ಷದವರೆಗೂ ಇರುವ ನವಲತ್ತನ್ನು ಕೊಟ್ಟಿದ್ದೀರಿ ಇನ್ನು ಮುಂದೆ ಕೂಡ ಅಧಿಕಾರಿಗಳು ತೀರಿಕೊಂಡರೆ, ಅಥವಾ ವರ್ಗವಾಗಿ ಹೋದರೆ ಆ ಮನೆಯಲ್ಲಿರುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ಇಲ್ಲದಿದ್ದರೆ ಬಂದ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರಿಗೂ ಕೂಡ ಆ ರೀತಿ ಕೊಡತಕ್ಕ ಪದ್ಧತಿ ಸರ್ಕಾರದಲ್ಲಿಲ್ಲ ಆದರೆ ಆಕಸ್ಮಿಕವಾಗಿ ಅಧಿಕಾರಿಗಳು ತೀರಿಕೊಂಡು ಹೋಗಿ ಬಿಟ್ಟರೆ ಒಂದರಿಂದ ನಾಲ್ಕು ತಿಂಗಳ ವರೆಗೆ ಹೆಣ್ಣು ಮಕ್ಕಳಿಗೆ ತೊಂದರೆಯಾಗುವ ಸಂದರ್ಭವಿದ್ದರೆ, ಆಯಾಯಾ ಕೇಸುಗಳನ್ನು ವಿಚಾರ ಮಾಡಿ ಮಾನವೀಯತೆಯ ಆಧಾರದ ಮೇರೆ ಅಲ್ಪಸ್ವಲ್ಪ ಕಾಲವನ್ನು ಕೊಡತಕ್ಕ ಪದ್ಧತಿ ಒಂದೆರಡು ಕೇಸ್‌ಗಳಲ್ಲಿ ಹಿಂದೆ ಅನುಸರಿಸಿಕೊಂಡು ಬಂದಿದ್ದೇವೆ, ಹಾಗೆ ಇದರಲ್ಲೂ ಮಾಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ವಸಂತನಗರದಲ್ಲಿ ಮನೆಯನ್ನು ಕೊಡುವಾಗ ಸರ್ಕಾರಿಆಫೀಸರುಗಳಿಗಾಗಲೀ ಅಥವಾ ಉದ್ಯೋಗಸ್ಥರಿಗಾಗಲೀ ಯಾರಿಗೆ ಮನೆ ಇಲ್ಲವೋ, ಅಂಥವರಿಗೆ ಮನೆ ಕೊಡಬೇಕು ಎಂಬ ಮೂಲ ತತ್ವವನ್ನು ಸರ್ಕಾರ ಇಟ್ಟುಕೊಂಡಿದೆಯೇ ? ಸ್ವಂತ ಮನೆಗಳನ್ನು ಬಾಡಿಗೆಗೆ ಕೊಟ್ಟುಕೊಂಡು ಸರ್ಕಾರಿ ಮನೆಗಳಲ್ಲಿ ಆಫೀಸರು ಇದ್ದರೆ ಅಥವಾ ಉದ್ಯೋಗಸ್ಥರು ಇದ್ದರೆ, ಅಂಥವರನ್ನು ಪತ್ತೆ ಹಚ್ಚಿ ಯಾರು ಯಾರಿಗೆ ಮನೆ ಇಲ್ಲವೋ ಅಂಥವರಿಗೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಮನೆ ಇಲ್ಲದೇ ಇರತಕ್ಕವರಿಗೆ ಮನೆ ಕೊಡತಕ್ಕದ್ದು ಎಂಬುದು ಸರ್ಕಾರದ ನೀತಿ ಎಂದು ಸ್ಪಷ್ಟವಾಗಿ ಹೇಳಿದ್ದೇವೆ.

MADAM SPEAKER.—Question Hour is Over.

QUESTIONS FOR ANSWERS ON THE DAY

(but not taken up)

Misuse of Motor Vehicle Permits

401. Sri ABDUL KHUDDUS ANWAR (Bhadravathi).—

Will the Minister for Labour be pleased be pleased to state :—

(*a*) the number of private buses plying in the State ;

(*b*) the number of Luxury, Contract and Inter-State buses plying in the State ;

(*c*) whether any special squad has been appointed by the Motor Vehicles Department to check the misuse of permit ;